# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ಸಂಖ್ಯೆ:ತುವಿ:ಶೈವಿ:2025-26/3057 ದಿನಾಂಕ:03.01.2026

## ಸುತ್ತೋಲೆ

ವಿಷಯ:- ಪರಿಸರ ಅಧ್ಯಯನ (Environmental Studies) ಕಡ್ಡಾಯ ಪತ್ರಿಕೆಯ ಬೋಧನೆಗೆ ಸಂಬಂಧಿಸಿದಂತೆ ಅಧ್ಯಾಪಕರ ಅರ್ಹತೆಯ ಬಗ್ಗೆ.

ಉಲ್ಲೇಖ:-1. ವಿ.ವಿ.ಅಧಿಸೂಚನೆ ಸಂಖ್ಯೆ:ತುವಿ.:ಶೈವಿ.:2025-26/2927, ದಿನಾಂಕ:20.12.2025.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:31.12.2025.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024-25 ಮತ್ತು 2025-26ನೇ ಶೈಕ್ಷಣಿಕ ಸಾಲುಗಳಲ್ಲಿ ರಾಜ್ಯ ಶಿಕ್ಷಣ ನೀತಿಯನ್ವಯ ವಿವಿಧ ಸ್ನಾತಕ ಪದವಿಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ 4ನೇ ಸೆಮಿಸ್ಟರ್‌ನಲ್ಲಿ 2 ಕ್ರೆಡಿಟ್‌ನ ಕಡ್ಡಾಯ ಪತ್ರಿಕೆಯಾಗಿ ಪರಿಸರ ವಿಜ್ಞಾನ(Envirnomental Studies) ಪತ್ರಿಕೆಯನ್ನು ಅಳವಡಿಸಿ ಅಧಿಸೂಚಿಸಲಾಗಿರುತ್ತದೆ. **ಸದರಿ ಅಧಿಸೂಚನೆಯಲ್ಲಿ ಪರಿಸರ ವಿಜ್ಞಾನ ಎಂದಿರುವುದನ್ನು ಪರಿಸರ ಅಧ್ಯಯನ ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳಲು ತಿಳಿಸಿದೆ.**

ಮುಂದುವರೆದು, ತುಮಕೂರು ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಿಳಿಸುವುದೇನೆಂದರೆ, ಯು.ಜಿ.ಸಿ.ಮಾರ್ಗಸೂಚಿಯನ್ವಯ ಹಾಗೂ ಅಧ್ಯಯನ ಮಂಡಳಿಯ ಶಿಫಾರಸ್ಸಿನಂತೆ ಹಾಗೂ ರಾಜ್ಯದ ಇತರೆ ವಿಶ್ವವಿದ್ಯಾನಿಲಯಗಳು ಅನುಸರಿಸುತ್ತಿರುವಂತೆ ಕಡ್ಡಾಯ ಪತ್ರಿಕೆಯಾದ ಪರಿಸರ ಅಧ್ಯಯನ ವಿಷಯವನ್ನು ಬೋಧಿಸಲು ಪರಿಸರ ವಿಜ್ಞಾನ (M.Sc in Envirnomental Science) ವಿಷಯದಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ ಅರ್ಹ ಅಧ್ಯಾಪಕರನ್ನು (ನೆಟ್/ ಸ್ಲೆಟ್/ ಪಿಹೆಚ್.ಡಿ ಹೊಂದಿರುವವರಿಗೆ ಆದ್ಯತೆ ನೀಡುವುದು) ಮಾತ್ರ ನೇಮಕ ಮಾಡಿಕೊಂಡು ಸದರಿಯವರಿಂದ ಪಠ್ಯಕ್ರಮ ಬೋಧನೆಗೆ ಅಗತ್ಯ ಕ್ರಮವಹಿಸುವಂತೆ ತಿಳಿಸಿದೆ.

ಒಂದು ವೇಳೆ ಸೂಕ್ತ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಈ ಕೆಳಕಂಡ ಪೂರಕ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದ ಪದವೀಧರರನ್ನು ಕೆಳಕಂಡ ಕ್ರಮದ ಆದ್ಯತೆಮೇರೆಗೆ ನೇಮಿಸಬಹುದಾಗಿದೆ.

**ಜೈವಿಕವಿಜ್ಞಾನ:**ಸಸ್ಯಶಾಸ್ತ್ರ/ ಪ್ರಾಣಿಶಾಸ್ತ್ರ/ ಸೂಕ್ಷ್ಮಜೀವಶಾಸ್ತ್ರ/ ಜೈವಿಕತಂತ್ರಜ್ಞಾನ/ ಜೀವವಿಜ್ಞಾನ.

**ರಸಾಯನವಿಜ್ಞಾನ ಮತ್ತು ಭೂವಿಜ್ಞಾನ:**ರಸಾಯನಶಾಸ್ತ್ರ/ ಜಿಯೋಲೊಜಿ/ ಭೂವಿಜ್ಞಾನ.

ಆದೇಶದ ಮೇರೆಗೆ,

ಉಪಕುಲಸಚಿವರು
ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ

ಗೆ

ಎಲ್ಲಾ ಸ್ನಾತಕ ಪದವಿಯ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಮು.ತಿ.ನೋ..

ಪ್ರತಿಗಳು:

1. ಕುಲಸಚಿವರು (ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಎಲ್ಲಾ ನಿಕಾಯಗಳ ಡೀನರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಕಚೇರಿ ಪ್ರತಿ.